


ಡಾ. ಎಂ.ವೆಂಕಟಸ್ವಾಮಿ

# ಬಿರುಗಾಳಿಗೆ ತತ್ತರ; ಮಗುಚಿದ ದೋಣಿ

ಎಲ್ಲರನ್ನು ಹತ್ತಿಸಿಕೊಂಡ ಮೇಲೆ ಅದರಲ್ಲಿದ್ದ ನಾವಿಕರು, ಎರಡೂ ಕಡೆ ಸಮಾನ ತೂಕ ಇರುವ ಹಾಗೆ ಕುಳಿತುಕೊಳ್ಳಿ ಎಂಬುದಾಗಿ ಕೆಲವರನ್ನು ಆ ಕಡೆಗೆ ಈ ಕಡೆಗೆ ಕರೆದು ಕೂರಿಸಿದರು. ಕೊನೆಗೆ ದಡಕ್ಕೆ ಕಟ್ಟಿದ್ದ ದೋಣಿಯ ಹಗ್ಗಗಳನ್ನು ಬಿಚ್ಚಿ ಡೀಸೆಲ್ ಎಂಜಿನನ್ನು ಪ್ರಾರಂಭಿಸಿದರು. ದೋಣಿ ನಿಧಾನವಾಗಿ ಸಾಗುತ್ತಿದ್ದಂತೆ ಜನರು ಎಡಗಡೆ ಮತ್ತು ಬಲಗಡೆಗೆ ನಡೆಯುತ್ತ ಕೆಲವರು ದೋಣಿಯ ಅಂಚುಗಳಲ್ಲಿ ಬೆಂಚುಗಳಲ್ಲಿ ಮತ್ತು ದೋಣಿಯ ಮುಂದಿದ್ದ ಎತ್ತರದ ತುದಿಯಲ್ಲಿ ನಿಂತುಕೊಂಡು ಫೋಟೊಗಳನ್ನು ತೆಗೆದುಕೊಳ್ಳುತ್ತಿದ್ದರು. ನೀಲಿ ಸಮುದ್ರದ ಮಧ್ಯೆ ದೋಣಿ ಸಾಗುತ್ತಿದ್ದಂತೆ ಸುತ್ತಲಿನ ದ್ವೀಪಗಳ ಹಸಿರು ಕಾಡುಗಳು, ಗಾಢವಾದ ನೀಲಿ ಸಮುದ್ರದ ಮೇಲೆ ತಿಳಿಯಾದ ನೀಲಿ ಸಮುದ್ರ ತೇಲುತ್ತಿರುವಂತೆ ಕಾಣಿಸುತ್ತಿತ್ತು. ಜನರು ಮೇಲೆ ಕೆಳಗೆ ಸುತ್ತಲಿನ ಸೌಂದರ್ಯವನ್ನು ನೋಡುತ್ತ ಆನಂದಿಸುತ್ತಿದ್ದರು.

ಸಮುದ್ರದ ಮೇಲೆ ಸಣ್ಣದಾಗಿ ಬಿರುಗಾಳಿ ಕಾಣಿಸಿಕೊಂಡಿತು. ಜೊತೆಗೆ ದಿಢೀರನೆ ಎಲ್ಲಿಂದಲೋ ಎದ್ದು ಬಂದ ಕಪ್ಪು ಮೋಡಗಳು ನೋಡು ನೋಡುತ್ತಿದ್ದಂತೆಯೆ ನಾವಿದ್ದ ದೋಣಿಯನ್ನು ಸುತ್ತಿಕೊಂಡುಬಿಟ್ಟವು. ಸಮುದ್ರದಲ್ಲಿ

